ಅನುಸೂಚಿ—ಬಿ

ಕೆ. ಎಸ್., ಐ. ಎಂ. ಸಿ, ಯವರು ನಿಗದಿ ಪಡಿಸಿರುವ ದರ ಒಪ್ಪಂದದಡಿಯಲ್ಲಿ ೧೯೮೮–೮೯ನೇ ಸಾಲಿನಲ್ಲಿ ಬೆಂಗಳೂರಿನಲ್ಲಿ ನೆಲೆಸಿರುವ ಸಣ ಕೈಗಾರಿಕಾ ಘಟಕಗಳಿಗೆ ನೀಡಿರುವ ಸರಬರಾಜು ಆದೇಶಗಳ ವಿವರ.

೧. ಎಬಿಸಿ ಕರ್ನಾಟಕ ಸ್ಟೀಲ್ ಇಂಡಸ್ಟ್ರೀಯಲ್ ಕಾರ್ಪೊರೇಷನ್
೨. ಅಭಿನಯ ಇಂಡಸ್ಟ್ರೀಸ್
೩. ಆನುಪಮ್ ಫ್ಯಾಬ್ಸ್
೪. ಶ್ರೀ ರಾಜರಾಜೇಶ್ವರಿ ಇಂಡಸ್ಟ್ರೀಯಲ್ ಕಾರ್ಪೊರೇಷನ್
೫. ಶ್ರೀ ಸಿದ್ಧಲಿಂಗೇಶ್ವರ ವರ್ಕ್ ಶಾಪ್
೬. ಶ್ರೀ ಚನ್ನಕೇಶವ ಎಂಟರ್‌ಪ್ರೈಸಸ್
೭. ಶ್ರೀ ವಿಜಯಲಕ್ಷ್ಮಿ ಸ್ಟೀಲ್ ಫರ್‌ನೀಚರ್
೮. ಎಂಪಿಇಇ ಎಂಟರ್‌ಪ್ರೈಸಸ್

ಸಣ್ಣ ಕೈಗಾರಿಕೆಗಳ ಪರವಾಗಿ ನಿಗಮದವರು ಸರಕು ಖರೀದಿ ಇಲಾಖೆ ಹಾಗೂ ಆರೋಗ್ಯ ಇಲಾಖೆಯಲ್ಲಿ ಪಡೆದುಕೊಂಡಿರುವ ದರ ಒಪ್ಪಂದದಡಿಯಲ್ಲಿ ಸಣ್ಣ ಕೈಗಾರಿಕೆಗಳಿಗೆ ನೀಡಿರುವ ಸರಬರಾಜು ಆದೇಶಗಳ ವಿವರ.

—ಯಾವುದೇ ಆರ್ಡರ್ ಬಂದಿರುವುದಿಲ್ಲ—

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಅಧಿಕಾರಿಗಳನ್ನು/ನೌಕರರನ್ನು ರಪ್ತು ಮೇಳಗಳಿಗೆ ಕಳುಹಿಸಿದ ಬಗ್ಗೆ

೧೨೮೩. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ)—ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆಗಳ ಉಪಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ೧೯೮೮–೮೯ರಲ್ಲಿ ವಿವಿಧ ರಪ್ತು ಮೇಳ ಹಾಗೂ ರಪ್ತು ಮಾರುಕಟ್ಟೆ ಕಂಡುಹಿಡಿಯುವ ಸಲುವಾಗಿ ಮಿಯಾಮಿ, ಯು.ಎಸ್.ಎ. ಹಾಗೂ ಮ್ಯಾಂಚೆಸ್ಟರ್, ಯು.ಕೆ. ರಪ್ತು ಮೇಳಗಳಿಗೆ ಕಳುಹಿಸಿದ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಅಧಿಕಾರಿಗಳ/ನೌಕರರ ಹೆಸರುಗಳು.

ಆ) ಮೇಳಗಳಲ್ಲಿ ಭಾಗವಹಿಸಲು ತಗುಲಿದ ವೆಚ್ಚ.

ಇ) ಈ ಮೇಳಗಳಲ್ಲಿ ಮಾರಾಟದ ಮೊತ್ತ.

ಈ) ೧೯೮೮–೮೯ರಲ್ಲಿ ನೇರ ರಫ್ತಿನಿಂದ ಗಳಿಸಿದಂತಹ ಮೊತ್ತ.

ಶ್ರೀಮತಿ ಸಂಪಾ ವಸಂತ (ಸಣ್ಣ ಪ್ರಮಾಣದ ಕೈಗಾರಿಕೆಗಳ ಉಪಸಚಿವೆಯರು).—

ಅ) ವಿಶ್ವ ಕನ್ನಡ ಮೇಳ ಮ್ಯಾಂಚೆಸ್ಟರ್, ಯು. ಕೆ. ಶ್ರೀ ಹೆಚ್. ಎಸ್. ಪ್ರಭಾಕರ್.

ಏಷಿಯಾ ಫೆಸ್ಟಿವಲ್ ಮಿಯಾಮಿ, ಯು.ಎಸ್.ಎ. ಶ್ರೀಮತಿ ವೀಣಾ ಶ್ರೀರಾಮರಾವ್, ಐ.ಎ.ಎಸ್., ವ್ಯವಸ್ಥಾಪಕ ನಿರ್ದೇಶಕರು. ಶ್ರೀ ಕೆ. ಬಿ. ತಿಮ್ಮಣ್ಣ

ಆ) ಶ್ರೀ ಎಚ್. ಎಸ್. ಪ್ರಭಾಕರ್ ರೂ. ೫೫,೧೨೭–೦೦
ಶ್ರೀಮತಿ ವೀಣಾ ಶ್ರೀರಾಮರಾವ್ ರೂ. ೯೧,೮೨೩–೦೦
ಶ್ರೀ ಕೆ. ಬಿ. ತಿಮ್ಮಣ್ಣ ರೂ. ೫೨,೨೫೧–೦೦

ಇ) ಮ್ಯಾಂಚೆಸ್ಟರ್, ಯು.ಕೆ. ರೂ. ೬೦,೭೮೭–೦೦
ಏಷಿಯಾ ಫೆಸ್ಟಿವಲ್ ಯು.ಎಸ್.ಎ, ರೂ. ೫೩,೮೦೩–೦೦

ಈ) ರೂ. ೧,೭೪,೨೮೭–೦೦